ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಪ್ರಾವಿಡೆಂಟ್ ಫಂಡ್ ಮತ್ತು ಇನ್‌ಷ್ಯೂರೆನ್ಸ್ ಕೊಡುವುದಕ್ಕೆ ಕಡಮೆ ಸಂಬಳ ಬರುವುದರಿಂದ ಕಷ್ಟವಾಗುತ್ತದೆ ಎಂದು ಹೇಳಿದರು. ಅವರಿಗೆ ಪೆನ್‌ಷನ್ ಕೊಡಬೇಕು ಎಂದರೆ ಟ್ರಿಪಲ್ ಬೆನಿಫಿಟ್ ಸ್ಕೀಂ ಎಂದು ಹೇಳುತ್ತಾರೆ. ಆದುದರಿಂದ ಈ ಮೂರೂ ಅನ್ವಯಿಸುವ ಹಾಗೆ ಮಾಡಿ, ಏಡೆಡ್ ಸ್ಕೂಲ್ ನೌಕರರಾದ ಜವಾನರಿಗೂ ಸಹಾಯವಾಗುವಂತೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ. ಬಹಳ ತೊಂದರೆಗಳಿವೆ.

Basic pay given to Draftsmen, Civil and Mechanical diploma holders of Industrial Training Institute.

*Q—618. Sri T. K. KAMBLI (Kundgol).—

Will the Government be pleased to state :—

(a) the basic pay given to Draftsmen, Civil and Mechanical Diploma Holders of Industrial Training Institute by the Public Works Department as per the Scheme of the Government of India ;

(b) whether the revised pay scales of 1961 has been given to them (detailed information in this behalf may be furnished) ?

A.—Sri G. B. SHANKARA RAO (Parliamentary Secretary to the Minister for Public Works).—

(a) Rs. 150 in the scale of Rs. 150-8-190-10-320 as per existing order.

(b) Yes.

ಶ್ರೀ ಟಿ. ಕೆ. ಕಂಬ್ಳಿ.—ಇಲ್ಲಿ ಹೇಳಿರುವ ಪ್ರಕಾರ 150–320 ಸ್ಕೇಲನ್ನು ಯಾವ ಸಾಲಿನಿಂದ ಕೊಡುವುದಕ್ಕೆ ಪುರು ಮಾಡಿದ್ದೀರಿ ?

Sri G. B. SHANKARA RAO.—From the year 1961. Service matters are governed by cadre and recruitment rules.

ಶ್ರೀ ಟಿ. ಕೆ. ಕಂಬ್ಳಿ.—1961ರಲ್ಲಿ ಈ ಸ್ಕೇಲು ಮಂಜೂರಾಗಿದೆ. ಇದನ್ನು ಹಾರಿಗೆ ಕೊಡಲು ಏಕೆ ಇಷ್ಟು ತಡವಾಗಿದೆ ?

ಶ್ರೀ ಜಿ. ಬಿ. ಶಂಕರರಾವ್.—1961 ರಿಂದ ಕೊಡಬೇಕೆಂದು ಮಾಡಿದ್ದೇವೆ. 36 ತಿಂಗಳು ಅಭ್ಯಾಸ ಮಾಡಿದ ಡಿಪ್ಲೊಮಾಧಾರಿಗಳಿಗೂ 18 ತಿಂಗಳು ವ್ಯಾಸಂಗಮಾಡಿದ ಸರ್ಟಿಫಿಕೇಟ್ ಧಾರಿಗಳಿಗೂ ಅಧ್ಯಯನದಲ್ಲಿ ವ್ಯತ್ಯಾಸವಿದ್ದುದರಿಂದ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದ್ದ ಕಾರಣ ತಡವಾಯಿತು.

ಶ್ರೀ ಟಿ. ಕೆ. ಕಂಬ್ಳಿ.—ಈ ಸ್ಕೇಲಿನಲ್ಲಿ ಎಷ್ಟು ವರ್ಷ ಕೆಲಸ ಮಾಡಿದರೆ ಖಾಯಂ ಆಗುತ್ತದೆ ? ನಿಮ್ಮ ಇರಾಖೆಯಲ್ಲಿ ಹಲವು ವರ್ಷಗಳು ಕೆಲಸ ಮಾಡಿದರೂ ಟೆಂಪೊರರಿ ಎಂದು ಇಡುವುದಕ್ಕೆ ಕಾರಣವೇನು ?

Sri G. B. SHANKARA RAO.—From the year 1961, service matters are governed by cadre and recruitment rules.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ಜನ ಮೆಕ್ಯಾನಿಕಲ್ ಡಿಪ್ಲೊಮಾ ಹೋಲ್ಡರುಗಳು ಕೆಲಸ ಬೇಡಿ ತಮ್ಮ ಮುಂದೆ ಅರ್ಜಿ ಸಲ್ಲಿಸಿದ್ದಾರೆ ?

ಅಧ್ಯಕ್ಷರು.—ಆ ಅಂಕಿಅಂಶಗಳ ಬಗ್ಗೆ ಬೇರೆ ಪ್ರಶ್ನೆಹಾಕಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1961ನೆಯ ರಿವೈಸ್ಡ್ ಸ್ಕೇಲ್ ಪ್ರಕಾರ ಎಷ್ಟು ಜನಕ್ಕೆ ನಮ್ಮ ರಾಜ್ಯದಲ್ಲಿ ಬೆನಿಫಿಟ್ ಆಗುತ್ತದೆ ?

(No reply)

ಶ್ರೀ ಎಚ್. ಡಿ. ದೇವೇಗೌಡ.—ಪಾಲಿಟೆಕ್ನಿಕ್ ಮತ್ತು ಇಂಜನಿಯರಿಂಗ್ ಸ್ಕೂಲ್‌ನಲ್ಲಿ ತರಬೇತು ಹೊಂದಿರತಕ್ಕ ಡಿಪ್ಲೊಮಾ ಹೋಲ್ಡರುಗಳಿಗೆ ಈ ಸ್ಕೇಲು ಅನ್ವಯಿಸುತ್ತದೆಯೇ ?

†ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು):—ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ನಿಂದ ಕೆಲವು ಜನ ಬರುತ್ತಾರೆ, ಪಾಲಿಟೆಕ್ನಿಕ್‌ನಿಂದ ಪಾಸ್ ಆದ ಡಿಪ್ಲೊಮಾ ಹೋಲ್ಡರುಗಳು ಇದ್ದಾರೆ, ಮೊದಲು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಿಂದ ಪಾಸ್ ಆದವರಿಗೆ 110-220 ಸ್ಕೇಲ್ ಕೊಡುತ್ತಾ ಇದ್ದೆವು, ಪಾಲಿಟೆಕ್ನಿಕ್‌ನಲ್ಲಿ ಪಾಸ್ ಆದವರಿಗೆ 150-320 ರೂಪಾಯಿಗಳ ಸ್ಕೇಲ್ ಕೊಡುತ್ತಾ ಇದ್ದೆವು. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಡಿಪ್ಲೊಮಾ ಹೋಲ್ಡರುಗಳು ಅಜಿಟೇಟ್ ಮಾಡಿ ನಮ್ಮನ್ನು ಪಾಲಿಟೆಕ್ನಿಕ್ ಡಿಪ್ಲೊಮಾ ಹೋಲ್ಡರ್ಸ್ ಜೊತೆಗೇ ಈಕ್ವೇಟ್‌ಮಾಡಿ ನಮಗೂ ಅಷ್ಟೇ ಸ್ಕೇಲ್ ಕೊಡಿ ಎಂದು ಕೇಳಿದರು. ಇದನ್ನೆಲ್ಲಾ ನಿನ್ನೆಯ ದಿವಸ ಹೇಳಿದ್ದೇನೆ. 61ರಲ್ಲಿ ಪಾಸ್ ಮಾಡಿದ ಜಿ. ಓ. ಬಗ್ಗೆ ಪಾಲಿಟೆಕ್ನಿಕ್ ಡಿಪ್ಲೊಮಾ ಹೋಲ್ಡರ್ ಪ್ರೊಟೆಸ್ಟ್ ಮಾಡಿದರು, ರೆಪ್ರಸೆಂಟೇಷನ್ ಕೊಟ್ಟರು, ಅದನ್ನು ಸರ್ಕಾರದವರು ಯೋಚನೆ ಮಾಡಿ, ಅದಕ್ಕೆ ಸಂಬಂಧಪಟ್ಟ ಚೀಫ್ ಇಂಜನಿಯರು ಅವರ ಕ್ವಾಲಿಫಿಕೇಷನ್ ಏನು, ಇವರ ಕ್ವಾಲಿಫಿಕೇಷನ್ ಏನು ಎಂಬುದನ್ನೆಲ್ಲಾ ವಿಚಾರ ಮಾಡಿದ ನಂತರ ಅವರಿಗೂ ಇವರಿಗೂ ಒಂದೇ ಸ್ಕೇಲ್ ಇರಬೇಕೆಂದು ನಿರ್ಧರ ಮಾಡಿದ್ದೆರು. ಈಗ ಇರುವ ಆರ್ಡರ್ ಪ್ರಕಾರ 150-320 ಸ್ಕೇಲು ಸಿಕ್ಕಿದೆ, ಅದನ್ನೆ ಈ ಸ್ಕೇಲನ್ನು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ಡಿಪ್ಲೊಮಾ ಹೋಲ್ಡರುಗಳಿಗೆ ಕೊಡಬಾರದು, ಅವರನ್ನು ಆ ರೀತಿ ಈಕ್ವೇಟ್ ಮಾಡಿದ್ದು ಸರಿಯಲ್ಲ ಎಂದು 61ರಲ್ಲಿ ಅದ ಜಿ. ಓ. ವಿತ್‌ಡ್ರಾ ಮಾಡಬೇಕೆಂದು ಮಾಡಿದ್ದೇವೆ, ವಿತ್‌ಡ್ರಾ ಮಾಡಿಲ್ಲ. ಅದಕ್ಕೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಆಗಬೇಕು ; ಅದು ಆದಮೇಲೆ ಇದೆಲ್ಲಾ ಸರಿಹೋಗುತ್ತದೆ.

Bus Stands under construction in North Kanara District.

*Q.—1130. Smt. V. V. MIRJANKAR (Kumta).—

Will the Government be pleased to state :—

(*a*) the number of bus stands which are under construction in the District of North Kanara ;

(*b*) when the sanction was accorded to the works at Ankola, Kumta and Siddapur and at what stage these works are pending ?

A.—Sri D. DEVARAJ URS (Minister for Labour, Housing and Transport).—

(*a*) Three.

(*b*)—

	Date of Administrative Approval.	*Stage of the work.*
1 Ankola...	14-4-1960	The work has come upto Lintel level.
2 Kumta...	10-6-1959	50 per cent of the roof work is completed.
3 Siddapur...	August 1958.	The work was completed in 1959.

ಶ್ರೀಮತಿ ವಿ. ವಿ. ಮಿರ್ಜಾಂಕರ್.—(ಎ) ಪ್ರಶ್ನೆಗೆ ಉತ್ತರವಾಗಿ ಮೂರು ಎಂದು ಉತ್ತರ ಹೇಳಿದ್ದೀರಿ. ಅವುಗಳನ್ನು ಯಾವ ಯಾವ ಕಡೆ ಮಾಡುತ್ತಾ ಇದ್ದೀರಿ ?